ಶ್ರೀ ಮುರುಗೇಶ್ ನಿರಾಣಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅವರು :– ಮಾನ್ಯ ಅಧ್ಯಕ್ಷರೆ.

1956ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯ ಕಲಂ 26ರ ಮೇರೆಗೆ :

1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ. ಬೆಂಗಳೂರು ಇದರ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದೆ ಮಂಡಿಸಲಾಯಿತು.

5. ಗಮನ ಸೆಳೆಯುವ ಸೂಚನೆ.

(ಅ) ವಿಷಯ ; ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾರಕ ರೋಗಗಳಿಂದ ಉಂಟಾಗಿರುವ ಸಾವುಗಳಿಗೆ ಪರಿಹಾರ ಮತ್ತು ರೋಗ ಹತೋಟಿಯ ಬಗ್ಗೆ.

ಶ್ರೀ ಕೆ.ವಸಂತ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾರಕ ರೋಗಗಳಿಂದ ಉಂಟಾಗಿರುವ ಸಾವುಗಳಿಗೆ ಪರಿಹಾರ ಮತ್ತು ರೋಗ ಹತೋಟಿಯ ಬಗ್ಗೆ ನಾನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) ; (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ;– ಮಾನ್ಯ ಅಧ್ಯಕ್ಷರೆ....

ಶ್ರೀ ಕೆ.ವಸಂತ ಬಂಗೇರ : ಮಾನ್ಯ ಅಧ್ಯಕ್ಷರೆ. ನಮಗೆ ಉತ್ತರವೇ ಬಂದಿಲ್ಲ.

ಅಧ್ಯಕ್ಷರು : ಮಾನ್ಯ ಅಶೋಕ್‌ರವರೆ. ಉತ್ತರದ ಪ್ರತಿಯನ್ನು ಒದಗಿಸಿಕೊಡಿ. ಅದರ ಪ್ರತಿ ಮಾನ್ಯ ಸದಸ್ಯರುಗಳಿಗೆ ತಲುಪಿಲ್ಲ. ಉತ್ತರದ ಪ್ರತಿಗಳನ್ನು ಸದಸ್ಯರುಗಳಿಗೆ ಸರಬರಾಜು ಮಾಡಿಲ್ಲ.

ಶ್ರೀ ಕೆ.ವಸಂತ ಬಂಗೇರ : ಅಧ್ಯಕ್ಷರೆ. ಬಡವರ ರೋಗದ ಬಗ್ಗೆ ಈ ಸರ್ಕಾರ ಯಾವ ರೀತಿ ಗಂಭೀರತೆ ಹೊಂದಿದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಅಧ್ಯಕ್ಷರು ; ಬಂಗೇರರವರೆ, ಇದನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ. ಐದು ನಿಮಿಷ ಅವಕಾಶ ಕೊಟ್ಟರೆ. ಉತ್ತರದ ಪ್ರತಿಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಬಿ.ರಮಾನಾಥ ರೈ ; ಅಧ್ಯಕ್ಷರೆ. ಇದು ಒಂದು ಮಹತ್ವವಾದ Calling Attention. ನಮ್ಮ ಜಿಲ್ಲೆಯ ಪರಿಸ್ಥಿತಿ ಬಹಳ ಗಂಭೀರವಾಗಿದೆ.

ಅಧ್ಯಕ್ಷರು ; ಇದು ಸರಿಯಿಲ್ಲ. ಈ ರೀತಿ ಮೊದಲನೇ ಸಲ ಆಗಿದೆ. ಇದನ್ನು ಸೋಮವಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇದು ಸರಿಯಲ್ಲವೆಂದು ನಾನೂ ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : Calling Attentionಗಳಿಗೂ ನೀವು ಉತ್ತರದ ಪ್ರತಿಗಳನ್ನು ಒದಗಿಸಿಕೊಡುವುದಿಲ್ಲವೆಂದರೆ. it shows your....

ಒಬ್ಬ ಮಾನ್ಯ ಸದಸ್ಯರು : ಇಲ್ಲಿದ್ದವರೆನ್ನೆಲ್ಲಾ ನಾವು ಛೀಮಾರಿ ಹಾಕಬೇಕು.

ಅಧ್ಯಕ್ಷರು ; ಛೀಮಾರಿ ಹಾಕುವಂಥಾದ್ದು ಏನೂ ಅಲ್ಲ. ಈಗ ನಾನು ಅವರಿಗೆ ನಿರ್ದೇಶನ ನೀಡಿದ್ದೇನೆ. ಇದನ್ನು ಸೋಮವಾರ ತೆಗೆದುಕೊಳ್ಳೋಣ.

ವಿಷಯ ; ಬೆಳಗಾವಿ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ಬಿಡುಗಡೆ ಮಾಡಿದ್ದ ಅನುದಾನವನ್ನು ಗದಗ ಜಿಲ್ಲೆಗೆ ವರ್ಗಾಯಿಸುತ್ತಿರುವುದರಿಂದ ಉಂಟಾಗುತ್ತಿರುವ ತೊಂದರೆಗಳು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ(ಚಿಕ್ಕೋಡಿ–ಸದಲಗಾ) ; ಮಾನ್ಯ ಅಧ್ಯಕ್ಷರೆ. ಬೆಳಗಾವಿ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ಬಿಡುಗಡೆ ಮಾಡಿದ್ದ ಅನುದಾನವನ್ನು ಗದಗ ಜಿಲ್ಲೆಗೆ ವರ್ಗಾಯಿಸುತ್ತಿರುವುದರಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನಕ್ಕೆ ಸೆಳೆಯುತ್ತಿದ್ದೇನೆ.

ಶ್ರೀ ಕೆ. ಕರುಣಾಕರ ರೆಡ್ಡಿ(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ. 2005ನೇ ಸಾಲಿನಲ್ಲಿ ಪ್ರವಾಹಪೀಡಿತವಾಗಿರುವ ಬೆಳಗಾಂ ಜಿಲ್ಲೆಯ 36 ಹಳ್ಳಗಳನ್ನು ಸ್ಥಳಾಂತರಿಸಲು 1570.17 ಲಕ್ಷ ರೂ.ಗಳನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 140 ಟಿಎನ್ಆರ್ 2008 ದಿ:25–8–2006ರಲ್ಲಿ ಬಿಡುಗಡೆ ಮಾಡಲಾಗಿತ್ತು. ಇದುವರೆಗೆ